ಗೆಳತಿಯೆಂದಾಗ ರಮ್ಯ ಸುತ್ತಾ ಕಣ್ಣಾಡಿಸಿದಳು. ಅವಳಿಗೂ ಅನುಮಾನ ಬರುವಂತಹ ಯಾವ ವ್ಯಕ್ತಿಯೂ ಕಾಣಲಿಲ್ಲ.

ಅಷ್ಟರಲ್ಲಿ ಬೇರರ್ ಊಟದ ಎರಡು ದೊಡ್ಡ ತಟ್ಟೆಗಳನ್ನು ತಂದಿತ್ತು ಹೋದ.

ಗೆಳತಿಯರಿಬ್ಬರ ಊಟವೂ ಸಾಗತೊಡಗಿತು.

'ರಮ್ಯ...ಹೇಮಂತನನ್ನು ಮರೆಯದೇ ಇರುವುದಕ್ಕೆ ಇನ್ನೊಂದು ಕಾರಣವೂ ಇದೆ ಅಂದಿದ್ದೆನಲ್ಲ.. ಅವ್ನು ನಂಗೆ ತಾಳಿ ಕಟ್ಟಿದೋನು ಕಣೇ'

ರಮ್ಯ ಚಕಿತಳಾಗಿ ಋತುವಿನತ್ತ ನೋಡಿದಳು. ಹದಿಹರೆಯದಲ್ಲಿ ಗೆಳತಿ ಮದುವೆಯ ಬಂಧನಕ್ಕೆ ಒಳಗಾಗಿರಬಹುದೇ? ಕುತೂಹಲ ಮುಖದಲ್ಲಿ ಇಣುಕಿತು.

ಋತು ಮಾತನಾಡತೊಡಗಿದ್ದಳು. ಶ್ರೀನಿವಾಸ ಕಲ್ಯಾಣದ ನೃತ್ಯ ರೂಪಕದಲ್ಲಿ ಹೇಮಂತ ಶ್ರೀನಿವಾಸನಾಗಿದ್ದು, ತಾನು ಪದ್ಮಾವತಿಯಾಗಿದ್ದು, ನೆರೆದಿದ್ದ ಸಾವಿರಾರು ಜನರ ಸಾಕ್ಷಿಯಾಗಿ ಅವನು ತನಗೆ ತಾಳಿ ಕಟ್ಟಿದ್ದು....ಎಲ್ಲವನ್ನೂ ಹೇಳತೊಡಗಿದಳು.

'ಋತು, ಚಿಕ್ಕಮಕ್ಕಳ ಮನಸ್ಸಿನಲ್ಲಿ ಸೂಕ್ಷ್ಮ ವಿಷಯವೂ ಹೇಗೆ ಆಳವಾಗಿ ಬೇರೂರುತ್ತದೆ ಅನ್ನೋದಕ್ಕೆ ನೀನೇ ಸಾಕ್ಷಿ ಕಣೇ, ನಿಮ್ಮ ಡ್ಯಾನ್ಸ್ ಟೀಚರ್ ಪ್ರೋಗ್ರಾಂ ನ್ಯಾಚುರಲ್ಲಾಗಿ ಬರಲಿ ಅಂತ ನಿಜವಾಗಿ ತಾಳಿ ಕಟ್ಟಿಸಿದ್ದಾರೆ, ನೀನು ಮೊದ್ಲೇ ಸೆನ್ಸಿಟಿವ್ ಗರ್ಲ್, ಆ ನಾಟಕದ ಮದ್ವೇನ ನಿಜವಾದ ಮದ್ವೆ ಅಂತ ನಂಬ್ಕೊಂಡು ಯಾವತ್ತೂ ಬಾರದ ಹೇಮಂತನಿಗಾಗಿ ಕಾಯ್ತಿದ್ದಿ. ಇಷ್ಟು ದಿನ ನೀನು ಸೂಕ್ಷ್ಮ ಸ್ವಭಾವದ ಹುಡ್ಗಿ ಅಂತ ಮಾತ್ರಾ ಅಂದ್ಕೊಂಡಿದ್ದೆ, ಆದ್ರೆ ನೀನು ಅರ್ಧ ಮೆಂಟಲ್ ಅಂತ ಈಗ್ಲೇ ಗೊತ್ತಾಗಿದ್ದು, ಅವ್ನಿಗಾಗಿ ಕಾಯುತ್ತಾ ನಿನ್ನ ಜೀವನವನ್ನೇ ದಂಡ ಮಾಡಿಕೊಂಡ್ಯಲ್ಲೇ' ರಮ್ಯ ತಲೆ ಚಚ್ಚಿಕೊಂಡಳು.

'ರಮ್ಯ, ನಿನ್ನೆಯವರೆಗೂ ನಾನು ಹೇಮಂತನಿಗಾಗಿ ಕಾದು ಬದುಕನ್ನು ದಂಡ ಮಾಡಿಕೊಂಡೆನೋ ಏನೋ ಎಂದು ಆಗಾಗ ಅನ್ನಿಸುತ್ತಿದ್ದುದಂತೂ ಹೌದು, ಆದ್ರೆ ಈ ದಿನ ನಾನು ನನ್ನ ಹೇಮಂತನನ್ನು ನೋಡ್ದೆ.'

ಗೆಳತಿಯ ಮಾತಿನಿಂದ ಆಶ್ಚರ್ಯಗೊಂಡಳು ರಮ್ಯ. 'ಇದು ಹೇಗೆ ಸಾಧ್ಯ? 13 ವರ್ಷದಿಂದ ಬಾರದ ಹೇಮಂತ ಈ ದಿನ ದಿಢೀರೆಂದು ಪ್ರತ್ಯಕ್ಷನಾಗುತ್ತಾನೆಯೇ? ಅಥವಾ ಅವನಿಗಾಗಿ ಹಂಬಲಿಸಿ ಗೆಳತಿ ನಿಜವಾಗಿಯೂ ಭ್ರಮೆಗೆ ಬಿದ್ದಿರಬಹುದೇ?' ನಂಬಲಾಗದಂತೆ ಗೆಳತಿಯತ್ತ ನೋಡಿದಳು.

'ನಂಗೊತ್ತು ರಮ್ಯ, ನೀನಿದನ್ನು ನಂಬಲ್ಲ ಅಂತ, ಆದ್ರೆ ಇದು ನಿಜವಾಗ್ಲೂ ಸತ್ಯ ಕಣೆ, ನನ್ನ ಹೇಮಂತ ಮತ್ಯಾರೂ ಅಲ್ಲ, ಈ ದಿನ ಕಾಲೇಜಿಗೆ ಬಂದಿದ್ರಲ್ಲಾ ಕುಮಾರ್....ಅವ್ರೇ.'

'ಯೂ ಮೀನ್ ಪ್ರೈವೇಟ್ ಡಿಟೆಕ್ಟಿವ್'

ಅವಳ ಮಾತಿಗೆ ಹೌದೆನ್ನುವಂತೆ ತಲೆಯಾಡಿಸಿದಳು ಋತು.

'ಓ....ಕಮಾನ್ ಋತು, ಮೊದಲನೆಯದಾಗಿ ಅವ್ನ ಹೆಸ್ರು ಹೇಮಂತ ಅಲ್ಲ, ಜೊತೆಗೆ ಆತ ಹುಟ್ಟಿ ಬೆಳೆದದ್ದೆಲ್ಲಾ ಕೋಲ್ಕತ್ತಾದಲ್ಲಿ ಅಂತ ಹೇಳಿದ್ನಲ್ಲಾ, ಹೀಗಿರೋವಾಗ ನಿನ್ನ ಶ್ರೀನಿವಾಸ ಕಲ್ಯಾಣ ದ ಆ ಹೇಮಂತ ಇವನಾಗಿರಲು ಸಾಧ್ಯವೇನೇ? ಎಲ್ಲದಕ್ಕೂ ಒಂದು ಮಿತಿಯಿದೆ ಋತು.... ನಂಗನ್ನಿಸುತ್ತೆ, ನೀನು ನಿಜವಾಗಿಯೂ ಭ್ರಮೆಗೆ ಬಿದ್ದಿರಬೇಕು....ನಿನ್ನ ಪಪ್ಪನ ಮಾತಿನಿಂದ ತಲೆಕೆಡಿಸಿಕೊಂಡು ರಾತ್ರಿಯೆಲ್ಲಾ ಹೇಮಂತನ ಬಗ್ಗೆ ಯೋಚಿಸ್ತಿರ್ತಿ, ಅದಕ್ಕೆ ನಿಂಗೆ ಹೀಗನ್ನಿಸ್ತಿದೆ....ಪ್ಲೀಸ್, ಇನ್ಮೇಲೆ ಇಂಥ ಹುಚ್ಚಾಟಗಳನ್ನೆಲ್ಲಾ ನಿಲ್ಲಿಸ್ಬಿಡು, ಬಹುಶಃ ಕುಮಾರ್ ಮೇಲೆ ನಿಂಗೆ ಗೊತ್ತಿಲ್ಲದಂತೆ ಪ್ರೀತಿ ಹುಟ್ಟಿರ್ಬೇಕು....ಅವ್ನು ಬ್ರಹ್ಮಚಾರಿಯಾಗಿದ್ರೆ ಪ್ರಯತ್ನಿಸುವಿಯಂತೆ ಬಿಡು.'

ರಮ್ಯ ಪಟಪಟನೆ ಮಾತನಾಡಿದಾಗ ಹುಸಿಕೋಪದಿಂದ ಅವಳತ್ತ ನೋಡಿದಳು ಋತು. ತನ್ನ ಮಾತುಗಳನ್ನು ಇವಳು ನಂಬಿದ ಹಾಗಿಲ್ಲ. ಇವಳೇನು....ಯಾರೂ ನಂಬಲಾರರು. ಆದರೆ ತನಗೇಕೆ ಹೀಗನ್ನಿಸುತ್ತಿದೆ. ಅವನ ಕಿರುನಗು, ಆ ಮಂದಹಾಸದ ಮುಖ, ಆ ಆರಾಧನೆಯ ನೋಟ....ಅದು ಹೇಮಂತನದೇ. ಆದರೆ ಇವನು ಆ ನೋಟವನ್ನೇಕೆ ಮತ್ತೆ ಮತ್ತೆ ನೆನಪಿಸುತ್ತಿದ್ದಾನೆ? ಏನಾದರಾಗಲೀ ತನ್ನ ಮನಸ್ಸು ಇವನೇ ಹೇಮಂತನೆಂದು ಒಪ್ಪಿಕೊಂಡಾಯಿತು. ಒಪ್ಪಿಕೊಂಡ ಆ ಸತ್ಯವನ್ನು ಅವಳಿಗರಿವಿಲ್ಲದಂತೆ ಗೆಳತಿಯ ಮುಂದೆ ಆಡಿಬಿಟ್ಟಿದ್ದಳು. ಹಾಗೆಲ್ಲಾ ಗಂಡಸರ ಪ್ರೇಮದೃಷ್ಟಿಗೆ ಬಲಿಯಾಗುವವಳೇ ತಾನು?....ತನ್ನ ಈ 27 ವರ್ಷದ ದೀರ್ಘ ಅವಧಿಯಲ್ಲಿ ಅದೆಷ್ಟು ಗಂಡಸರು ತನ್ನನ್ನು ಆಕರ್ಷಿಸಲು ಯತ್ನಿಸಿದ್ದಾರೆ. ಯಾರನ್ನೂ ಮನಸ್ಸಿನಾಳಕ್ಕೆ ಬಿಟ್ಟುಕೊಳ್ಳಲಾರದ ಮನಸ್ಸು ಈ ದಿನ ಕುಮಾರನನ್ನು ನೋಡಿದ ತಕ್ಷಣ ಇವನೇ ಹೇಮಂತನೆಂದು ನಿರ್ಧರಿಸುವುದೆಂದರೆ....ನೋಡೋಣ, ಮುಂದೇನಾಗುತ್ತದೋ ಆಗಲಿ.

'ಋತು....ನಿನ್ನ ಊಟ ಮುಗೀತು ಮಹರಾಯ್ತಿ, ಇನ್ನೂ ಹಸಿವು ಹೋಗಿಲ್ಲವೆಂದಾದ್ರೆ ಮತ್ತೇನಾದ್ರೂ ಆರ್ಡರ್ ಮಾಡ್ಲಾ?' ರಮ್ಯ ಛೇಡಿಸಿದಾಗ ವಾಸ್ತವಕ್ಕೆ ಮರಳಿದಳು. ತನ್ನ ಈ ಸ್ಥಿತಿಯ ಬಗ್ಗೆ ತನಗೇ ನಾಚುವಂತಾಯಿತು.

'ಇನ್ನು ಆ ಹೇಮಂತನ ಬಗ್ಗೆ ತಲೆಕೆಡಿಸಿಕೊಳ್ಬೇಡ, ಪ್ರೈವೇಟ್ ಡಿಟೆಕ್ಟಿವ್ ಕುಮಾರ್ ನಿನ್ನ ಮನಸ್ಸನ್ನು ಕದ್ದು ಬಿಟ್ಟಿದ್ದಾನೆ, ಅವನ ತನಿಖೆ ಮುಗಿಯುವುದರೊಳಗೆ ನಿಮ್ಮ ಪ್ರೇಮ ಫಲಿತವಾಗಲಿ ಅಂತ ಹಾರೈಸ್ತೀನಿ.'

ರಮ್ಯ ಛೇಡಿಸುವ ಧ್ವನಿಯಲ್ಲಿ ಮಾತನಾಡಿದಾಗ ಋತು ಮರುತ್ತರಿಸಲಿಲ್ಲ. ಈಗ ಮೌನವಾಗಿರುವುದೇ ಒಳ್ಳೆಯದೆನಿಸಿತು.

ಊಟ ಮುಗಿಸಿ ಇಬ್ಬರೂ ಹೊರಬಂದರು. ಗಾಡಿಯನ್ನು ಪಾರ್ಕ್ ಮಾಡಿದ ಕಡೆ ನಡೆದುಕೊಂಡು ಹೋಗತೊಡಗಿದಾಗಲೇ ಕೆನೆ ಬಣ್ಣದ ಕಾರೊಂದು ಗಕ್ಕನೆ ಪಕ್ಕದಲ್ಲಿ ಬಂದು ನಿಂತಿತು. ಕಾರಿನ ಹಿಂದಿನ ಬಾಗಿಲು ತೆರೆದುಕೊಂಡಿತು.

'ಪ್ಲೀಸ್ ಕಮ್....ನಮ್ಮ ಕಾರಿನಲ್ಲಿ ಒಂದು ಜಾಲಿ ರೈಡ್ ಹೋಗೋಣ್ವಂತೆ..'. ಎಂದ ಆ ವ್ಯಕ್ತಿ ಅವರ ಪ್ರತಿಕ್ರಿಯೆಗೂ ಕಾಯದೆ ಮಿಂಚಿನ ವೇಗದಲ್ಲಿ ಅವರನ್ನು ಒಳಕ್ಕೆಳೆದುಕೊಂಡು ಬಾಗಿಲು ಹಾಕಿತು....!

7

## ಕಾರಿನಲ್ಲಿ ಋತು, ರಮ್ಯ ಅಪಹರಣ

ಹಾಡುಹಾಗಲೇ ಕಣ್ಮುಚ್ಚಿ ತೆರೆಯುವುದರೊಳಗೆ ಈ ಘಟನೆ ನಡೆದು ಹೋಗಿತ್ತು. ಗಡಿಬಿಡಿಯಲ್ಲಿ ಓಡಾಡಿಕೊಂಡಿರುವ ಮಹಾನಗರದ ಜನತೆಗೆ ಇವನ್ನೆಲ್ಲಾ ನೋಡುವಷ್ಟು ವ್ಯವಧಾನವಾದರೂ ಎಲ್ಲಿದೆ? ಋತು, ರಮ್ಯರನ್ನು

## ಇಲ್ಲಿಯವರೆಗೆ



ಋತು ತನ್ನ ಗೆಳತಿ ರಮ್ಯ ಜತೆಗೆ ಕಲ್ಲು ಬಂಡೆ ಮೇಲೆ ಮಾತನಾಡಿದಾಗ ಯಾರೋ ಋತುವನ್ನು ಫಾಲೊ ಮಾಡುತ್ತಿದ್ದ ವಿಷಯ ರಮ್ಯ ತಿಳಿಸುತ್ತಾಳೆ. ಆತಂಕಗೊಂಡ ಋತು ತನ್ನ ತಂದೆಗೆ ಈ ವಿಷಯ ತಿಳಿಸುತ್ತಾಳೆ. ತಂದೆ ಪುರುಷೋತ್ತಮರಾಯರು ಸಮಾಧಾನದ ಮಾತುಗಳನ್ನು ಹೇಳುತ್ತಾರೆ. ಮದುವೆಯ ಪ್ರಸ್ತಾಪವನ್ನೂ ಮಾಡುತ್ತಾರೆ. ಆಗ ಋತುವಿಗೆ ಹೇಮಂತನ ನೆನಪು ಕಾಡುತ್ತದೆ. ಶಾಲಾ ವಾರ್ಷಿಕೋತ್ಸವದಲ್ಲಿ 'ಶ್ರೀನಿವಾಸ ಕಲ್ಯಾಣ' ನಾಟಕದಲ್ಲಿ ಹೇಮಂತ ಶ್ರೀನಿವಾಸನ ಪಾತ್ರ ಮಾಡಿ ಪದ್ಮಾವತಿ ಪಾತ್ರ ಮಾಡಿದ್ದ ಋತುವಿಗೆ ತಾಳಿ ಕಟ್ಟುತ್ತಾನೆ. ಈ ನೆನಪಿನಲ್ಲೇ ಇದ್ದ ಋತುವಿಗೆ ಈಗ 30ರ ಅಂಚಿನಲ್ಲಿರಬಹುದಾದ ಹೇಮಂತ ಹೇಗಿರಬಹುದು ಎಂಬ ಯೋಚನೆ ಬರುತ್ತದೆ. ಇತ್ತ ಕಾಲೇಜಿನ ಪ್ರಿನ್ಸಿಪಾಲ್ ಭುವನೇಶ್ವರಿ ಋತುವನ್ನು ಮಾತುಕತೆಗಾಗಿ ಕರೆಸುತ್ತಾರೆ.